**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 14.08.2026**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಹೆಚ್ ಇ ಪಿ ವಕೀಲರಿಂದ**

**1.** ನಾನು ಎಲ್ಲ ಗುರುತಿನ ಚೀಟಿ ಹಾಗೂ ಎಲ್ಲಾ ಮಾರ್ಕ್ಸ್ ಕಾರ್ಡ್‌ಗಳಲ್ಲಿ ನನ್ನ ಹೆಸರು ಬದಲಾವಣೆಗೆ ಕೇಳಿಕೊಂಡಿರುತ್ತೇನೆ. ವ್ಯಾಸಂಗ ದೃಡೀಕರಣ ಪತ್ರವನ್ನು ನನ್ನ ಹುಟ್ಟಿದ ಹೆಸರು ಮದನ್ ಚಂದ್ರಶೇಖರ್ ಆದ ಕಾರಣ ಅವುಗಳನ್ನು ಬದಲಾಯಿಸಲು ಕೇಳಿರುತ್ತೇನೆ. ನನಗೆ ಈಗ ಒಂದೂವರೆ ವರುಷದಿಂದ ನ್ಯೂಮರಲಿಜಿ ಪ್ರಕಾರ ನನ್ನ ಹೆಸರನ್ನು ಬದಲಾವಣೆ ಮಾಡಿಕೊಳ್ಳಲು ನಾನು ಇಚ್ಚಿಸಿರುತ್ತೇನೆ. ದಿಃ 14.06.2018 ಕ್ಕೆ ಪ್ಯಾನ್ ಕಾರ್ಡ್ ಕಚೇರಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ . 2018 ರಲ್ಲಿ ಏಕೆ ಅರ್ಜಿಯನ್ನು ಕೊಟ್ಟಿರುತ್ತೇನೆ ಎಂದು ನನಗೆ ಈಗ ನೆನಪಾಗುತ್ತಿಲ್ಲ. ನಾನು ನೀಡಿರುವ ನೋಟಿಸಗೆ 3 ನೆ ಪ್ರತಿವಾದಿಯವರು ಪ್ರತ್ಯುತ್ತರ ನೀಡಿದ್ದು ಅದರ ಬಗ್ಗೆ ನಾನು ನಮ್ಮ ವಕೀಲರಿಗೆ ಕೇಳಿ ತಿಳಿದುಕೊಂಡಿರುತ್ತೇನೆ.

2. 3 ನೆ ಪ್ರತಿವಾದಿಯು ಪ್ರತ್ಯುತ್ತರದಲ್ಲಿ ಹೆಸರನ್ನು ಬದಲಾಯಿಸಲು ಅದಕ್ಕೆ ಪೂರಕವಾಗಿ ದಾಖಲಾತಿಗಳು ಹಾಗು ಶುಲ್ಕ ಕೊಟ್ಟಿದ್ದಲ್ಲಿ ಬದಲಾಯಿಸಲು ಸಾಧ್ಯತೆ ಇರುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸರಿ . ನನಗೆ ಈ ಮೊದಲೆ 3 ನೆ ಪ್ರತಿವಾದಿ ಸಂಪರ್ಕಿಸಿ ಅವರಲ್ಲಿ ಹೆಸರು ಬದಲಾವಣೆಗೆ ಕೇಳಲು ಮಾರ್ಗವಿದ್ದರೂ ಅವರ ವಿರುದ್ಧ ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ 3 ನೆ ಪ್ರತಿವಾದಿಯ ಖರ್ಚು ವೆಚ್ಚಗಳನ್ನು ನಾನೇ ಭರಿಸಲು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ